# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 119/16-17.**

**ದಿನಾಂಕ : 26-10-2016.**

ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಮಾಯಿಲಪ್ಪ,<br>ಬಿನ್. ಬಾಬು ಪೂಜಾರಿ,<br>ಕುಂಜೂರು ಮನೆ,ಬನ್ನೂರು ಗ್ರಾಮ,<br>ಪುತ್ತೂರು ತಾಲೂಕು ದ.ಕ.<br>(ನ್ಯಾಯವಾದಿ ಶ್ರೀ ಶಶಿಧರ್ ಬಿ.ಎನ್. ) | -ಮತ್ತು- | ತಹಶೀಲ್ದಾರರು,<br>ಪುತ್ತೂರು ತಾಲೂಕು ದ.ಕ. |

**--**

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಪುತ್ತೂರು ತಾಲೂಕು ಬನ್ನೂರು ಗ್ರಾಮದ ಎಂ.ಆರ್ H 26/15-16 ದಿನಾಂಕ 14-9-2015ರಂತೆ ಪುತ್ತೂರು ತಾಲುಕು ತಹಶೀಲ್ದಾರರು ನೀಡಿದ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಪುತ್ತೂರು ತಾಲೂಕು ಬನ್ನೂರು ಗ್ರಾಮದ ಆಸ್ತಿಗಳನ್ನು ಪುತ್ತೂರು ಸ.ರಿ ಕಛೇರಿಯ ನೋಂದಾಯಿತ ದಸ್ತಾವೇಜು ಸಂಖ್ಯೆ 3040/15-16 ದಿನಾಂಕ : 10-09-2015 ರ ವಿಭಾಗಪತ್ರದಂತೆ ಮೇಲ್ಮನವಿದಾರರು ಹಾಗೂ ಇತರ 7 ಜನ ಒಟ್ಟು ಸೇರಿ ಜಮೀನನ್ನು ವಿಭಾಗಿಸಿಕೊಂಡಿರುತ್ತಾರೆ. ಸದರಿ ವಿಭಾಗಪತ್ರದ ಎ ಶೆಡ್ಯೂಲ್ ಆಸ್ತಿಯು ವಿಭಾಗಪತ್ರದಲ್ಲಿ ನಮೂದಿಸಿದ 1ನೇ ಜತ್ತಪ್ಪ ಪೂಜಾರಿಯವರಿಗೆ, ಬಿ ಶೆಡ್ಯೂಲ್ ಆಸ್ತಿಯು 2ನೇ ಲೀಲಾ, 3ನೇ ಜಾನಕಿ, 6ನೇ ಪದ್ಮಾವತಿ ಮತ್ತು 7ನೇ ಜಯಂತಿ ಇವರ ಹಿಸ್ಸೆಗೆ, ಸಿ ಶೆಡ್ಯೂಲ್ ಆಸ್ತಿ 4ನೇ ಕೇಶವ ಎಂಬವರ ಹಿಸ್ಸೆಗೆ, ಡಿ ಶೆಡ್ಯೂಲ್ ಆಸ್ತಿ 5ನೇ ಮಾಯಿಲಪ್ಪ ಎಂಬವರ ಹಿಸ್ಸೆಗೆ, ಇ ಶೆಡ್ಯೂಲ್ ಆಸ್ತಿ 8ನೇ ಬಾಲಪ್ಪರವರ ಹಿಸ್ಸೆಗೂ ವಿಂಗಡಿಸಲ್ಪಟ್ಟಿರುವುದಾಗಿದೆ. ವಿಭಾಗ ಪತ್ರದಲ್ಲಿ ವಿಂಗಡಿಸಲ್ಪಟ್ಟಂತೆ ಮ್ಯುಟೇಶನ್ ಆಗಬೇಕಾಗಿದ್ದು, ಮ್ಯುಟೇಶನ್ ಪ್ರಕ್ರಿಯೆಯಲ್ಲಿ ಲೋಪಗಳಾಗಿರುತ್ತವೆ. ಪ್ರಶ್ನೀತ ಮ್ಯುಟೇಶನ್ ಆದೇಶ ಮಾಡುವುದಕ್ಕೆ

ಮುಂಚಿತವಾಗಿ ಎಲ್ಲಾ ಹಿಶೆದಾರರಿಗೆ ತಿಳುವಳಿಕೆ ಪತ್ರ ನೀಡಿರುವುದಿಲ್ಲ. ಪಹಣಿ ದಾಖಲಾತಿಯೂ ವಿಭಾಗಪತ್ರದಂತೆ ಆಗಿರುವುದಿಲ್ಲ. ಇದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 07-09-2016 ರಂದು ಹಾಜರಾಗುವಂತೆ ನೋಟೀಸು ನೀಡಿ ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ದಿನಾಂಕ : 10-09-2015 ರಂದು ಪುತ್ತೂರು ಸ.ರಿ ಕಛೇರಿಯ ದ.ನಂ. 3040/15-16 ರಂತೆ ಮಾಡಿಕೊಂಡ ವಿಭಾಗಪತ್ರ ಪ್ರಕಾರ A,B,C,D,E, ಶೆಡ್ಯೂಲ್ ಗಳನ್ನಾಗಿಸಿಕೊಳ್ಳಲಾಗಿದೆ. ಸದರಿ ಶೆಡ್ಯೂಲ್ ಗಳಲ್ಲಿ ಒಳಗೊಂಡ ವ್ಯಕ್ತಿ ಹಾಗೂ ಜಮೀನುಗಳ ವಿವರ ಖಾತಾ ಬದಲಾವಣೆ ಸಮಯ ವ್ಯತ್ಯಾಸವಾಗಿರುವುದರಿಂದ ವಿಭಾಗಪತ್ರದಂತೆ ಅವರವರ ಶೆಡ್ಯೂಲ್ ಪ್ರಕಾರ ಖಾತೆ ದಾಖಲಿಸುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ದಿನಾಂಕ : 10-09-2015 ರ ಪುತ್ತೂರು ಸ.ರಿ ಕಛೇರಿಯ ವಿಭಾಗಪತ್ರ ದಸ್ತಾವೇಜು ನಂಬ್ರ 3040/15-16 ರಂತೆ ಖಾತಾ ಬದಲಾವಣೆ ಆಗಿರುವುದಿಲ್ಲವೆಂಬುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

<u>ಆದೇಶ.</u>

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಪುತ್ತೂರು ತಾಲೂಕು ಬನ್ನೂರು ಗ್ರಾಮದ ಎಂ.ಆರ್ H 26/15-16 ದಿನಾಂಕ 14-09-2015 ನೇ ಆದೇಶವನ್ನು ರದ್ದುಪಡಿಸಿ ಆದೇಶಿಸಿದೆ. ದಿನಾಂಕ : 10-9-2015 ರಂದು ಪುತ್ತೂರು ಸ.ರಿ ಕಛೇರಿಯ ದಸ್ತಾವೇಜು ನಂಬ್ರ 3040/15-16 ರ ವಿಭಾಗ ಪತ್ರದಲ್ಲಿ ಆಯಾಯ ಶೆಡ್ಯೂಲ್ ದಾರರಿಗೆ ವಿಂಗಡಿಸಿದಂತೆ ಖಾತೆ ಬದಲಾವಣೆಗೆ ಸೂಕ್ತ ಕ್ರಮ ಜರಗಿಸಲು ಪುತ್ತೂರು ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ : 26-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ. ಕೆ.ವಿ, ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಶ್ರೀ ಶಶಿಧರ್ ಬಿ.ಎನ್ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಬನ್ನೂರು ಗ್ರಾಮದ MR H 26/15-16,36/15-16,MRT 102/15-16 ಪುಟ ಸಂಖ್ಯೆ 1 ರಿಂದ 198 ರವರೆಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.